

‘ಅಪ್ಪಾ, ನಾನು ಏನ್ ಕೇಳಿದ್ರೂ ಇಲ್ಲ ಅನ್ನೋಲ್ಲ ಅಲ್ವಾ...?’

ಅತ್ಯಾಚಾರಕ್ಕೊಳಗಾಗಿ ಗಾಯಗೊಂಡು ಆಸ್ಪತ್ರೆಯ ಬೆಡ್ ಮೇಲೆ ಮಲಗಿರುವ ಮಗಳು ಅಪ್ಪನನ್ನು ನಡುಗುವ ಧ್ವನಿಯಲ್ಲೇ ಕೇಳುತ್ತಾಳೆ. ಮಗಳ ಸ್ಥಿತಿ ಕಂಡು ಕಣ್ಣೀರಿಡುತ್ತಲೇ ಅಪ್ಪ ‘ಹೂಂ’ ಎಂದು ತಲೆಯಾಡಿಸುತ್ತಾನೆ.

‘ಅಪ್ಪಾ, ನಾನು ಏನ್ ತಪ್ಪು ಮಾಡಿದ್ದೆ ಅಂತ ಅವ್ರು ನನಗೆ ಹೀಗೆ ಮಾಡಿದ್ರು... ನಾನು ಅವರನ್ನು ಕೇಳಬೇಕು, ನೋಡ್ಬೇಕು, ಕರ್ಕೊಂಡು ಹೋಗಪ್ಪಾ...’ ಎಂದು ಮಗಳು ಹೇಳುತ್ತಿದ್ದರೆ, ಅಪ್ಪ ಮಗಳ ಪ್ರಶ್ನೆಗೆ ಉತ್ತರಿಸಲಾಗದೇ ಅಸಹಾಯಕನಾಗುತ್ತಾನೆ.

—ಈಚೆಗಷ್ಟೇ ತೆರೆಕಂಡ ವಿಜಯ್ ಸೇತುಪತಿ ಅಭಿನಯದ ‘ಮಹಾರಾಜ’ ಸಿನಿಮಾದ ದೃಶ್ಯವಿದು.

ಇಲ್ಲಿ ಸಂತ್ರಸ್ತೆ ಅಮ್ಮು ತನ್ನದಲ್ಲದ ತಪ್ಪಿಗೆ ಅತ್ಯಾಚಾರಕ್ಕೊಳಗಾಗಿ ಹಿಂಸೆ ಅನುಭವಿಸುತ್ತಾಳೆ. ಅಂತೆಯೇ ನಮ್ಮ ಸಮಾಜದಲ್ಲಿ ಅಮ್ಮುವಿನಂಥ ಸಾವಿರಾರು ಹೆಣ್ಣುಮಕ್ಕಳು ತಮ್ಮದಲ್ಲದ ತಪ್ಪಿಗೆ ಹಿಂಸೆ ಅನುಭವಿಸುತ್ತಿದ್ದರೆ, ಅತ್ಯಾಚಾರ ಮಾಡಿಯೂ, ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಂಡು ಸಾವಿರಾರು ಅಪರಾಧಿಗಳು ನಮ್ಮ ಕಣ್ಣೆದುರಿನಲ್ಲೇ ಆರಾಮವಾಗಿ ಓಡಾಡುತ್ತಿದ್ದಾರೆ.

ಅತ್ಯಾಚಾರಿಗಳ ಭಂಡತನಕ್ಕೆ ಇಂಬುಗೊಡುವಂತಿವೆ ಅತ್ಯಾಚಾರ ಪ್ರಕರಣಗಳ ಇತ್ತೀಚಿನ ಅಂಕಿ–ಅಂಶ. ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಕರ್ನಾಟಕದ ರಾಜಧಾನಿ ಬೆಂಗಳೂರು ನಗರವೊಂದರಲ್ಲೇ ದಾಖಲಾದ ಅತ್ಯಾಚಾರ ಪ್ರಕರಣಗಳ ಸಂಖ್ಯೆ 1,322. ಆದರೆ, ಇವುಗಳಲ್ಲಿ ಶಿಕ್ಷೆಯಾಗಿರುವುದು ಕೇವಲ 10 ಪ್ರಕರಣಗಳಲ್ಲಿ ಮಾತ್ರ. ಅಂದರೆ, ಶಿಕ್ಷೆಯ ಪ್ರಮಾಣ ಕೇವಲ ಶೇ. 0.76ರಷ್ಟು ಮಾತ್ರ. ಜಾಗತಿಕ ಮಟ್ಟದಲ್ಲಿ ಹೋಲಿಸಿದರೆ ಅತ್ಯಾಚಾರಿಗಳಿಗೆ ಶಿಕ್ಷೆಯಾಗುತ್ತಿರುವ ಪ್ರಮಾಣ ಭಾರತದಲ್ಲಿಯೇ ಕಡಿಮೆ ಇದೆ. 2013ರಿಂದ 2022ರ ನಡುವೆ ಅತ್ಯಾಚಾರ ಪ್ರಕರಣಗಳಲ್ಲಿ ಶಿಕ್ಷೆಯಾದ ಪ್ರಮಾಣ ಶೇ. 29.25ರಷ್ಟು ಮಾತ್ರ. ಈ ಪ್ರಕರಣಗಳಲ್ಲಿ ಕನಿಷ್ಠ ಶೇ. 50ರಷ್ಟು ಅಪರಾಧಿಗಳಿಗೂ ಶಿಕ್ಷೆಯಾಗಿಲ್ಲ ಎಂಬುದು ದುರಂತ.

ರಾಷ್ಟ್ರವನ್ನೇ ಬೆಚ್ಚಿಬೀಳಿಸಿದ್ದ, ವಿದೇಶಿ ಮಾಧ್ಯಮಗಳಲ್ಲೂ ಬಹುಚರ್ಚಿತವಾಗಿದ್ದ 2012ರ ನಿರ್ಭಯಾ ಪ್ರಕರಣದ ನಂತರ ಕಾನೂನು ಬಿಗಿಯಾಗಿದ್ದರೂ ಅತ್ಯಾಚಾರಿಗಳು ಮಾತ್ರ ತಮ್ಮ ಜಾತಿ, ಹಣ, ರಾಜಕೀಯ ಪ್ರಭಾವ, ಕೊಲೆ, ಬೆದರಿಕೆಯ ತಂತ್ರಗಳನ್ನು ಬಳಸಿ ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಿರುವುದು ಮೇಲ್ನೋಟಕ್ಕೇ ಗೋಚರವಾಗುತ್ತಿದೆ. ಇದರ ಜತೆಗೆ ದೇಶದ ಸಾಮಾಜಿಕ ಸಂರಚನೆಯಲ್ಲಿರುವ ಹೆಣ್ಣು–ಗಂಡಿನ ಸ್ಥಾನಮಾನಗಳೂ ಅಪರಾಧಿಗಳು ಶಿಕ್ಷೆಯಿಂದ ನುಣುಚಿಕೊಳ್ಳಲು ಪರೋಕ್ಷವಾಗಿ ನೆರವಾಗುತ್ತಿವೆ.

ನಿರ್ಭಯಾ ಪ್ರಕರಣದ ವೇಳೆ ವ್ಯಕ್ತವಾದ ಸಾರ್ವಜನಿಕ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು, ಕೇಂದ್ರ ಸರ್ಕಾರವು ‘ನ್ಯಾ. ವರ್ಮಾ ಸಮಿತಿ’ಯ ಶಿಫಾರಸುಗಳ ಅನ್ವಯ ಅತ್ಯಾಚಾರ ಸೇರಿದಂತೆ ಮಹಿಳೆಯರ ವಿರುದ್ಧದ ಲೈಂಗಿಕ ದೌರ್ಜನ್ಯದ ಕಾನೂನಿಗೆ ಕೆಲವು ತಿದ್ದುಪಡಿಗಳನ್ನು ತಂದಿದೆ. ಭಾರತೀಯ ದಂಡ ಸಂಹಿತೆಯ (ಐಪಿಸಿ) 375, 376 ಸೆಕ್ಷನ್‌ಗಳಿಗೆ ತಿದ್ದುಪಡಿ ತರಲಾಗಿದೆ. ಜತೆಗೆ, 166ಎ, 166ಬಿ, 326 ಎ ಮತ್ತು ಬಿ, 354ಎ, ಸಿ ಮತ್ತು ಡಿ ಸೆಕ್ಷನ್‌ಗಳನ್ನು ಹೊಸದಾಗಿ ಸೇರಿಸಲಾಗಿತ್ತು. ಅದು ‘ನಿರ್ಭಯಾ ಕಾಯ್ದೆ’ ಎಂದೇ ಹೆಸರು ಪಡೆದಿದೆ. ಬಾಲಾಪರಾಧ ಕಾಯ್ದೆಗೂ ತಿದ್ದುಪಡಿ ತಂದು, ಹೀನ ಕೃತ್ಯ ಎಸಗಿದ ಆರೋಪಿಯು 16ರಿಂದ 18



## ದೂರು ದಾಖಲು: ಲಿಂಗಸೂಕ್ಷ್ಮತೆ ಇರಲಿ

ಸಂತ್ರಸ್ತೆ ಅಥವಾ ದೂರುದಾರರು ದೂರು ನೀಡುವಾಗಲೇ ಹಲವು ಲೋಪದೋಷಗಳಿರುತ್ತವೆ. ಇದನ್ನೇ ಆರೋಪಿ ಪರ ವಕೀಲರು ಲಾಭದಾಯಕವಾಗಿ ಪರಿಗಣಿಸುತ್ತಾರೆ. ಇದರಿಂದಲೂ ಸಂತ್ರಸ್ತೆಗೆ ನ್ಯಾಯ ಮರೀಚಿಕೆಯಾಗುತ್ತದೆ. ದೂರು ದಾಖಲಿಸುವಾಗ ಠಾಣೆಗಳಲ್ಲಿರುವ ರೈಟರ್ ಏನು ಬರೆಯುತ್ತಾನೆ ಎಂಬುದೇ ಮುಖ್ಯ. ಆತ ಸಂತ್ರಸ್ತೆ ಹೇಳಿದ್ದನ್ನು ಸರಿಯಾಗಿ ಅರ್ಥ ಮಾಡಿಕೊಂಡು ಬರೆಯಬೇಕು. ಇಲ್ಲಿ ಲಿಂಗಸೂಕ್ಷ್ಮತೆ ಅತ್ಯಗತ್ಯ. ಚಾರ್ಜ್‌ಶೀಟ್ ಅನ್ನು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್‌ಗೆ ಕೊಡುತ್ತಾರೆ. ಅಮೆರಿಕ ಮತ್ತು ಬ್ರಿಟನ್‌ಗಳಲ್ಲಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳು ಪೊಲೀಸರ ಜತೆಯಲ್ಲೇ ಇರುತ್ತಾರೆ. ನಮ್ಮ ದೇಶದಲ್ಲಿ ಇಬ್ಬರ ನಡುವೆ ನಿರಂತರ ಸಂವಹನದ ಕೊರತೆ ಇದೆ. ಎಷ್ಟೋ ಬಾರಿ ಕೇಸ್ ಬಗ್ಗೆ ಸಂಪೂರ್ಣ ಜ್ಞಾನವೂ ಇರುವುದಿಲ್ಲ. ಮೊದಲೇ ಜ್ಞಾನ ಇದ್ದರೆ ಅಪರಾಧಿಗಳಿಗೆ ಶಿಕ್ಷೆ ವಿಧಿಸುವ ಪ್ರಮಾಣ ಹೆಚ್ಚುತ್ತದೆ.

**-ಶಿವಮಣಿ**, ವಕೀಲ

## ಅತ್ಯಾಚಾರ: ತಕ್ಷಣ ಏನು ಮಾಡಬೇಕು?



ವೈದ್ಯಕೀಯ ಪರೀಕ್ಷೆಗೆ ಒಳಪಡುವವರೆಗೂ ಸ್ನಾನ ಮಾಡಬಾರದು. ಮೂತ್ರಕ್ಕೆ ಹೋಗಬಾರದು. ಹಲ್ಲುಜ್ಜಿ ಮುಖ ತೊಳೆಯಬಾರದು.

ಅತ್ಯಾಚಾರ ನಡೆದಾಗ ತೊಟ್ಟ ಒಳ ಉಡುಪುಗಳನ್ನು ಬದಲಿಸಬಾರದು ಹಾಗೂ ನಾಶಗೊಳಿಸಬಾರದು.

ಕೃತ್ಯ ನಡೆದ ಸ್ಥಳವನ್ನು ಪೊಲೀಸರು ಬರುವವರೆಗೆ ಸಾಧ್ಯವಾದರೆ ಹಾಗೆಯೇ ಕಾಪಾಡಬೇಕು. ಅತ್ಯಾಚಾರಕ್ಕೊಳಗಾದ ವ್ಯಕ್ತಿ ಆಸ್ಪತ್ರೆಗೆ (ಖಾಸಗಿ/ಸರ್ಕಾರಿ ಆಸ್ಪತ್ರೆ ಯಾವುದೇ ಆದರೂ) ಬಂದ ಕೂಡಲೇ ಮೊದಲು ಪ್ರಾಥಮಿಕ ಚಿಕಿತ್ಸೆ ನೀಡಿ, ವಿಷಯ ತಿಳಿದ ಕೂಡಲೇ ಪೊಲೀಸರಿಗೆ ಮಾಹಿತಿ ನೀಡಬೇಕು.

**-ಡಾ.ಎಚ್.ಎಸ್. ಅನುಪಮಾ**, ವೈದ್ಯೆ